ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು).—೧೯೮೬ನೇ ಇಸವಿಯ ಕರ್ನಾಟಕ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, "೧೯೮೬ನೇ ಇಸವಿಯ ಕರ್ನಾಟಕ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಪ್ರಕಟಣೆ

ಅಧ್ಯಕ್ಷರು.—ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ೯ನೇ ನಿಯಮದ ಮೇರೆಗೆ ನಾನು ವಿಧಾನಸಭೆಯ ಅಧ್ಯಕ್ಷತೆ ವಹಿಸುವವರ ಹೆಸರುಗಳ ಪಟ್ಟಿಯಲ್ಲಿರುವ ಶ್ರೀ ಹೆಚ್.ಟಿ. ಕೃಷ್ಣಪ್ಪನವರ ಸ್ಥಾನದಲ್ಲಿ ಶ್ರೀ ಹೆಚ್.ಜಿ. ಗೋವಿಂದೇಗೌಡರನ್ನು ನಾಮನಿರ್ದೇಶನ ಮಾಡಿರುತ್ತೇನೆ.

ನಿಯಮ ೬೮ರ ಮೇರೆಗೆ ಚರ್ಚೆ

ರಾಜ್ಯದಲ್ಲಿ ಗೋಲೀಬಾರ್ ಹಾಗೂ ಕೋಮು ಘರ್ಷಣೆ ಮತ್ತು ಭಾಷಾ ವಿವಾದಗಳ ಬಗ್ಗೆ

೩-೦೦ ಪಿ. ಎಂ.

ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಮೇಲೆ ಅಲ್ಪಕಾಲಾವಧಿ ಚರ್ಚೆ

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಸಭಾಧ್ಯಕ್ಷರೇ, ವಿರೋಧ ಪಕ್ಷದವರಾದ ನಾವು ಒಂದು ನಿಲುವಳಿ ಸೂಚನೆಯನ್ನು ಈ ಸದನದ ಕಾರ್ಯಕಲಾಪಗಳು ಪ್ರಾರಂಭ ಆದಾಗ ತಮ್ಮ ಗಮನಕ್ಕೆ ತಂದೆವು. ಅದು ಬಹಳ ಪ್ರಮುಖವಾಗಿರ ತಕ್ಕಂಥ ವಿಚಾರ. ಕರ್ನಾಟಕ ರಾಜ್ಯದಲ್ಲಿ ಮೂರು ಕಡೆಗಳಲ್ಲಿ ಗೋಲೀಬಾರ್ ಆಗಿರುವ ವಿಚಾರ. ಈ ಸದನ ಈ ಸಾರಿ ಸೇರುವುದಕ್ಕಿಂತ ಮೊದಲು

MR. DEPUTY SPEAKER.—In the Chair.

ರಾಮನಗರ, ಗುಲ್ಬರ್ಗಾ ಜಿಲ್ಲೆಯ ಆಳಂದ್ ಹಾಗೂ ಬೆಳಗಾಂ ಜಿಲ್ಲೆಯಲ್ಲಿ ಗೋಲೀಬಾರ್ ಆಗಿರ ತಕ್ಕಂಥ ವಿಚಾರದ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ತಮ್ಮ ಗಮನಕ್ಕೆ ನಾವು ಕಳುಹಿಸಿದ್ದೆವು. ತಾವು ನಾವು ಪ್ರಾಸ್ತಾವಿಕವಾಗಿ ಮಾತನ್ನು ಹೇಳುವುದಕ್ಕಿಂತ ಮುಂಚಿತವಾಗಿ ಒಂದು ತೀರ್ಮಾನಕ್ಕೆ ಬಂದಿದ್ದೀರಿ. ಇದನ್ನು ನಿಲುವಳಿ ಸೂಚನೆಯಾಗಿ ತೆಗೆದುಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ, ಇದನ್ನು ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತನೆ ಮಾಡಬಹುದು ಎಂಬ ಒಂದು ತೀರ್ಮಾನ ಮಾಡಿದ್ದೇವೆ ಎಂಬ ಮಾತನ್ನು ಅಧ್ಯಕ್ಷರಾದ ತಾವು ತಿಳಿಸಿದ್ದೀರಿ. ನಾವು ಅದನ್ನು ಬಿಟ್ಟಿಲ್ಲ. ಆನಂತರ ಒಂದು ಚರ್ಚೆ ಈ ಸದನದಲ್ಲಿ ಆಗಬೇಕು, ಈ ವಿಷಯ ಚರ್ಚೆ ಆಗ ತಕ್ಕಂಥ ಸಂದರ್ಭದಲ್ಲಿ ಈ ಸದನದ ಮಾನ್ಯ ಸದಸ್ಯರುಗಳು, ಈ ಕಡೆ ಕುಳಿತಿರತಕ್ಕಂಥ ಮಾನ್ಯ ಸದಸ್ಯರುಗಳು ಈ ಒಂದು ಚರ್ಚೆಯಲ್ಲಿ ಭಾಗವಹಿಸಿ, ಇದರ ಬಗ್ಗೆ ಹೆಚ್ಚಿನ ಬೆಳಕನ್ನು ಜಿಲ್ಲೂವ ಸದವಕಾಶ ತಾವು ಮಾಡಿಕೊಟ್ಟಿದ್ದೀರಿ. ಅದಕ್ಕೆ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಿಯಮಾವಳಿ ೬೮ರ ಪ್ರಕಾರ ಇದನ್ನು ಮಾಡಿಕೊಟ್ಟಿದ್ದೀರಿ.

ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದಿರತಕ್ಕಂಥ ಪ್ರಶ್ನೆ, ಕರ್ನಾಟಕ ರಾಜ್ಯದಲ್ಲಿ ಮೂರು ಕಡೆಗಳಲ್ಲಿ ಗೋಲೀಬಾರ್ ಆಗಿ ಜನರು ಸತ್ತಿರತಕ್ಕಂಥ ವಿಚಾರದ ಬಗ್ಗೆ ಚರ್ಚೆ. ಒಟ್ಟು ಸತ್ತಿರತಕ್ಕಂಥ ಜನರ ಸಂಖ್ಯೆ, ಗುಲ್ಬರ್ಗಾ ಜಿಲ್ಲೆಯ ಆಳಂದ್‌ನಲ್ಲಿ ಮೂರು ಸಾವು, ಗೋಲೀಬಾರ್‌ನಲ್ಲಿ ಸತ್ತಿರ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.